ನಂ. 129. ತಾರೀಖು 3ನೇ ಜೂ೯ 1876.

ಮಾಜೀ ಕೊಪ್ಪದ ಮೆಸ್ಟರ್ ವಿಲ್ವನಾಚೈಯನವರು ಮೈಸೂರು ಕೊಡಗು ಸೀಮೆಗಳ ಕೋರ್ಟುಗಳಲ್ಲಿ ಪ್ಲೀಡರಾಗಿ ಬೆಂಗಳೂರಲ್ಲಿರುವ ಜುಡಿಷಲ್ ಕಮ್ಮಿಷನರ್ ಆಫಿಸ್‌ನಲ್ಲಿ ದಾಖಲ್‌ಮಾಡಲ್ಪಟ್ಟಿರುತ್ತಾರೆ.

J. D. GORDON,
Judl. Commr.

ಪೊಲೀಸ್ ಇಲಾಖೆ.

ತಾರೀಖು 2ನೇ ಜೂ೯ 1876.

ಯಿದರಡಿ ನಮೂದಿಸಲ್ಪಡುವ ಬಹಲ್‌ಗಳು, ಪೊಲೀಸ್ ಇಲಾಖೆಯಲ್ಲಿ, ಅಜಮಾಯಿಷೀ ತರೀಕ್, ಮಾಡಲ್ಪಟ್ಟಿರುತ್ತೆ.

ರಂಗ್ಗರಾಯರು 1876ನೇ ಇಸವಿ ಮೇ 22ನೇ ಮುಕ್ತಂ ಲಾಗಾಯಿತು 4ನೇ ಕ್ಲಾಸ್ ಇನ್ಸ್‌ಪೆಕ್ಟರಾಗಿ ಕಡೂರು ಡಿಸ್ಟ್ರಿಕ್ಟಿಗೆ ಮೊಕರರ್.

ಡಾನಿಯಲ್ ಪಳ್ಳಿಯವರು 1876ನೇ ಮೇ 29ನೇ ಮುಕ್ತಂ ಲಾಗಾಯಿತು 4ನೇ ಕ್ಲಾಸ್ ಇನ್ಸ್‌ಪೆಕ್ಟರಾಗಿ ಕೋಲಾರ ಡಿಸ್ಟ್ರಿಕ್ಟಿಗೆ ಮೊಕರರ್.

ತಾರೀಖು 8ನೇ ಜೂ೯ 1876.

ಕಡೂರು ಡಿಸ್ಟ್ರಿಕ್ಟು ಸಬ್ ಇನ್ಸ್‌ಪೆಕ್ಟರ್ ಮಿರಜಾ ಮೊಹದಿಯವರು 1876ನೇ ಇಸವಿ ಏಪ್ರೆಲ್ 23ನೇ ತಾರೀಖು ಲಾಗಾಯಿತು ಪೊಲೀಸ್ 4ನೇ ಕ್ಲಾಸ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಭಡತಿ ಮಾಡಲ್ಪಟ್ಟಿರುತ್ತಾರೆ.

"ಬವೋಜೀಬ್ ಹುಕ್ಕುಂ,"

E. D. GOMPERTZ,
Dy. Inspr. Genl. of Police.

ಇನಾಂ ಇಲಾಖೆ.

ನಂ 4. ತಾರೀಖು 3ನೇ ಜೂ೯ 1876.

ಸ೯ 1976ನೇ ಇಸವಿ ಏಪ್ರೆಲ್ 8ನೇ ಮುಕ್ತಂ ಮೈಸೂರು ಗೆಜೆಟ್ ಯರಡನೇ ಭಾಗದಲ್ಲಿ 154ನೇ ಪುಟದೊಳಗೆ ಫಾಯಿಷ್ ಮಾಡಲ್ಪಟ್ಟ ಮಾರ್ಚ್ ಮಾಹೇ 29ನೇ ಮುಕ್ತಂ 22ನೇ ನಂಬರ್ ಇಸ್ತಿಹಾರ್ ಕುರಿತು ಇದರಿಂದ ಪ್ರಸಿದ್ಧಪಡಿಸುವದೇನಂದರೆ— ಬೇಲೂರು ತಾಲ್ಲೂಕಿನಲ್ಲಿರುವ ಇನಾಮತಿಗಳ ಊರ್ಜಿತತ್ವವನ್ನು ಕುರಿತು ಮಾಡಲ್ಪಡುವ ವಿಚಾರಣೆಯು ಮತ್ತೊಂದು ಹುಕ್ಕುಂ ಕೊಡುವ ವರಿಗೂ ಮುನ್ನಾ ಮಾಡಲ್ಪಟ್ಟಿರುತ್ತೆ.

R. A. COLE,
Supt. of Inam Settlements.

ಮಣಿ ಅರ್ಡ್ರ್ ಇಲಾಖೆ.

ಸರ್ಕ್ಯುಲರ್ ಇಸ್ತಿಹಾರ್ ನಂ. 58—ತಾರೀಖು 5ನೇ ಜೂ೯ 1876.

ಮುಂಬಾಯಿ ಮಣಿಆರ್ಡ್ರ್ ಇಲಾಖಾ ಇಂದಾ ಬಂದ ಅಡ್ವೈಸ್ ಅನುಸರಿಸಿ ಮೈಸೂರಲ್ಲಿರುವ ಡಿಸ್ಟ್ರಿಕ್ಟು ಟ್ರೈಜರೀ ಆಫಿಸರ್‌ಗಳಿಗೂ ಸಕ್ಲೇಶ ಪುರದ ಮಣಿಆರ್ಡ್ರ್ ಯೇಜಂಟರಿಗೂ ತಿಳಿಯಪಡಿಸುವದೇನಂದರೆ, ಸ೯ 1876ನೇ ಇಸವೀ ಜೂ೯ ಗುರ್ವೇ ತಾರೀಖು ಲಾಗಾಯಿತು ಮುಂಬೈ ಪ್ರೆಸಿಡೆನ್ಸಿಯಲ್ಲಿರುವ ಆಲ್ಲಿಬಾಗ್ ಯಂಬ ಸ್ಥಳದಲ್ಲಿ ವೊಂದು ಹೊಸ ಮಣಿಆರ್ಡ್ರ್ ಆಫಿಸ್ ತೆರಿಯಲ್ಪಟ್ಟಿರುತ್ತೆ. ಸದರೀ ಟ್ರೈಜರೀಯಿಂದಲೂ, ಆ ಟ್ರೈಜರಿ ಮೇಲೂ ಮಣಿಆರ್ಡ್ರ್‌ಗಳು ಕೊಡಲ್ಪಡಬಹುದು.

2. ಮುಂಬೈ ಸರ್ಕಲ್ ಮಹಾಬಲೇಶ್ವರದಲ್ಲಿರುವ ಮಣಿಆರ್ಡ್ರ್ ಆಫಿಸ್ 1876ನೇ ಇಸವೀ ಜೂ೯ 10ರಲಾಗಾಯಿತು ಬರುವ ಅಕ್ಟೋಬರ್ 10ರ ವರಿಗೆ ಮಳ್ಳೇ ಕಾಲದೊಳಗೆ ಮುಚ್ಚಲ್ಪಡುವದು. ಸದರೀ ಟ್ರೈಜರೀ ಮೇಲೆ ಕೊಡಲ್ಪಟ್ಟ ಮತ್ತು ವೊಬಲಗ್ ಪಾವತೀಯಾಗದೆ ನಿಂತಿರುವ ಮಣಿಆರ್ಡ್ರ್‌ಗಳಿಗೆ ಸತಾರಾ ಹುಜೂರು ಟ್ರೈಜರಿಯಲ್ಲಿ ವೊಬಲಗ್ ಸಲ್ಲುವದು.

ಈ ಅಂಕಗಳನ್ನು ಕುರಿತು ಲಿಸ್ಟಿನ ಮೇಲೆ ಷರಾ ಮಾಡಿಕೊಳ್ಳತಕ್ಕದ್ದು,

H. HUDSON,
Controller, Money Order Offices,
Mysore Circle.